### ಕೊರೊನಾ ಕಾಲದಲ್ಲಿ ಪರೀಕ್ಷಾಭ್ಯಾಸ

ಗುರುರಾಜ್ ಎಸ್. ದಾವಣಗೆರೆ (ಫೆ. 25ರ ಸಂಚಿಕೆ ) ಬರೆದಿರುವ 'ಕೊರೊನಾ ಕಾಲದಲ್ಲಿ ಪರೀಕ್ಷಾಭ್ಯಾಸ' ಲೇಖನ ಹತ್ತನೆಯ ತರಗತಿ ಮತ್ತು ಪಿಯುಸಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಖಂಡಿತ ಧೈರ್ಯ ತುಂಬುವ ಕೆಲಸ ಮಾಡಿದೆ. ಇರುವ ಸ್ವಲ್ಪ ಸಮಯದಲ್ಲೇ ತರಗತಿಗಳನ್ನು ಶುರುಮಾಡಿ, ಹತ್ತನೇ ಮತ್ತು ಪಿಯುಸಿ ಪರೀಕ್ಷೆಗಳ ದಿನಾಂಕವನ್ನು ಸರ್ಕಾರ ಪ್ರಕಟಿಸಿದೆ. ಈ ಸಲ ಪರೀಕ್ಷೆ ಬರೆದ ಎಲ್ಲಾ ಮಕ್ಕಳಿಗೆ ಶಿಕ್ಷಕರು ಮೌಲ್ಯಮಾಪನ ಸಂದರ್ಭದಲ್ಲಿ ಸ್ವಲ್ಪ ಉದಾರತೆ ತೋರಿದರೆ ಒಳ್ಳೆಯದು.

—ಬಾಣಾವರ ನಾಗರಾಜ, ಬೆಂಗಳೂರು

ಲೇಖನ ರೂಪದಲ್ಲಿ ಬಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷಾ ಸಿದ್ಧತೆಯ ಮಾರ್ಗದರ್ಶಿ ತುಂಬ ಚೆನ್ನಾಗಿದೆ. ಲೇಖಕರು ನೀಡಿದ ಎಲ್ಲ ಟಿಪ್ಸ್‌ಗಳೂ ಉಪಯುಕ್ತವಾಗಿವೆ.

—ಸಿ.ಟಿ. ಶೋಭಾ, ಚಳ್ಳಕೆರೆ



ಬೆಂಗಳೂರಿನ ಚಿಕ್ಕಬಿದರಕಲ್ಲಿನ ಶ್ರೀ ರಾಮ ಪಬ್ಲಿಕ್ ಸ್ಕೂಲ್‌ನಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು, ಫೆ. 25ರ 'ಸುಧಾ' ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಅವರು ಬರೆದ 'ಕೊರೊನಾ ಕಾಲದಲ್ಲಿ ಪರೀಕ್ಷಾಭ್ಯಾಸ' ಲೇಖನವನ್ನು ವಾಚನ ಮಾಡುತ್ತಿರುವುದು.

### ಮಕ್ಕಳ ಬರೆದ ಚಿತ್ರ ಪ್ರಕಟಿಸಿ

ನಾನು ಏಳನೇ ತರಗತಿ ಓದುತ್ತಿದ್ದೇನೆ. ನಾನು 'ಸುಧಾ'ವನ್ನು ಪ್ರತಿವಾರ ಓದುತ್ತೇನೆ. ಅದರಲ್ಲಿನ ಎಳೆಯರ ಅಂಗಳದಲ್ಲಿ ಬರುವ ಕಥೆಯನ್ನು ತಪ್ಪದೇ ಓದುತ್ತೇನೆ. ಪದಬಂಧವನ್ನು ತುಂಬುತ್ತೇನೆ. ಮಕ್ಕಳ ಕಥೆಯನ್ನು ಓದಿ, ಯಾರಿಗೂ ಮೋಸ ಮಾಡಬಾರದು, ಸತ್ಯವನ್ನೇ ನುಡಿಯಬೇಕು ಎಂಬುದನ್ನು ತಿಳಿದುಕೊಂಡಿದ್ದೇನೆ. ಹೊಂದಿಕೊಂಡು ಬಾಳುವುದು, ಸ್ನೇಹಿತರಿಗೆ ಹಾಗೂ ಬಂಧುಗಳಿಗೆ ಕಷ್ಟ ಬಂದಾಗ ನೆರವಾಗುವುದು, ಪ್ರಾಣಿಗಳ ಮೇಲೆ ದಯೆತೋರಿಸುವುದು, ಹಿರಿಯರನ್ನು ಗೌರವಿಸುವುದನ್ನು ಕಲಿತಿದ್ದೇನೆ. ಪದಬಂಧವನ್ನು ತುಂಬುತ್ತ ಕನ್ನಡ ಪದಗಳ ಅರ್ಥವನ್ನು ತಿಳಿದುಕೊಂಡಿದ್ದೇನೆ. ಪೌರಾಣಿಕದಲ್ಲಿ ಬರುವ ಪಾತ್ರಧಾರಿಗಳ ಹೆಸರು ಹಾಗೂ ಸನ್ನಿವೇಶವನ್ನು ತಿಳಿದುಕೊಂಡಿದ್ದೇನೆ. ಕನ್ನಡ ಎಂದರೆ ನನಗೆ ತುಂಬಾ ಇಷ್ಟ. ನನ್ನದೊಂದು ಕೋರಿಕೆ, ಮಕ್ಕಳು ಬರೆದ ಚಿತ್ರವನ್ನು ಪ್ರಕಟಿಸಿ.

—ಇಂಚರ ದತ್, ಬೆಂಗಳೂರು

### ಸಂಸ್ಕೃತ ಜಿಜ್ಞಾಸುಗಳ ಅಕ್ಷಯಪಾತ್ರೆ

ಮಾಲತಿ ಪಟ್ಟಣಶೆಟ್ಟಿ ಅವರು ಫೆ. 25ರ ಸಂಚಿಕೆಯಲ್ಲಿ ಬರೆದಿರುವ 'ಸಂಸ್ಕೃತ ಜಿಜ್ಞಾಸುಗಳ ಅಕ್ಷಯಪಾತ್ರೆ..' ಲೇಖನ ಚೆನ್ನಾಗಿದೆ. ಜ್ಞಾನ ದೇಗುಲದ ಸಂಸ್ಥಾಪನೆಗೆಂದು ತಮ್ಮ ತನು, ಮನ, ಧನ ಅರ್ಪಿಸಿದ ಉದಾರ ದಾನಿಗಳು, ಗಣ್ಯರು ಪ್ರಾತಃಸ್ಮರಣೀಯರು.

—ನಿರುಕ್ತಾ

ಬದಲಾದ ಕಾಲಮಾನದಲ್ಲಿ ಸಂಸ್ಕೃತ ಕಲಿಕೆಯ ದಿಕ್ಕು ಬದಲಾಗಬೇಕಾಗಿದೆ. ಇವತ್ತು ಸಂಸ್ಕೃತ ಕೇವಲ ಉಪಜೀವನಕ್ಕಾಗಿ ಮಾತ್ರವಲ್ಲ, ಸಂಸ್ಕೃತಿಗಾಗಿ, ಸಾಹಿತ್ಯ ಪ್ರೀತಿಗಾಗಿ, ಸಮಾಜದ ಒಳಿತಿಗಾಗಿ ಕಲಿಯುವ ಅವಶ್ಯಕತೆ ಇದೆ. ಅದಕ್ಕೆ ಸಂಸ್ಕೃತ ಪಾಠಶಾಲೆ ಹೊಸ ಉಪಕ್ರಮಗಳನ್ನು ಪ್ರಾರಂಭಿಸಬೇಕು. ಆಗ ಇಂದಿನ ಜಗತ್ತಿಗೆ ಸಂಸ್ಕೃತ ಸಲ್ಲುವ ಹೊಸ ದಾರಿ ತೆರೆದುಕೊಳ್ಳಬಹುದು.

—ಗುರುರಾವ ಕುಲಕರ್ಣಿ, ಬೆಂಗಳೂರು

ಧಾರವಾಡ ಸಂಸ್ಕೃತ ಪಾಠಶಾಲೆಯ ಬಗ್ಗೆ ಬರೆದ ಲೇಖನ ಸೊಗಸಾಗಿದೆ. ಆ ಪಾಠಶಾಲೆ ನಮ್ಮ ಧಾರವಾಡದ ಹೆಮ್ಮೆಯಾಗಿದೆ.

—ಶೈಲಜಾ ಜೋಶಿ, ಗದಗ

—ಪಿ. ಜಯವಂತ ಪೈ, ಕುಂದಾಪುರ

### ಉತ್ತಮ ಕಿವಿ ಮಾತು

ಫೆ. 25ರ ಸಂಚಿಕೆಯಲ್ಲಿ ಪ್ರಕಟವಾದ ಡಾ. ರಂಗಸ್ವಾಮಿ ಅವರ 'ಪ್ರೀತಿಯಷ್ಟೇ ಸಾಲದು, ಎಚ್ಚರವೂ ಬೇಕು' ಲೇಖನ, ಈಗಿನ ಪೋಷಕರಿಗೆ ಅವಶ್ಯವಾಗಿದೆ.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಇವರನ್ನು ತಂದೆ ತಾಯಿಯರು ಯಾವ ರೀತಿಯಲ್ಲಿ ಬೆಳಸಬೇಕು ಎಂಬುದನ್ನು ಲೇಖಕರು ಚೆನ್ನಾಗಿ ತಿಳಿಸಿದ್ದಾರೆ.

—ನರಸಿಂಹ ರಾವ್, ಬೆಂಗಳೂರು

### ಸುಂದರ ಕಥೆ



ವ ಸು ೦ ಧ ರಾ ಕ ದ ಲೂ ರು ಅವರು ಫೆ. 25ರ ಸಂಚಿಕೆಯಲ್ಲಿ ಬರೆದಿರುವ 'ಸುಖಾಂತ್ಯ' ಕಥೆ ಹಲವಾರು ಮನಗಳ ನೈಜ ಕಥೆ.

—ಎಂ. ಎಸ್. ಬೆಂಗಳೂರು

ಕಥೆ ಬಹಳ ಚೆನ್ನಾಗಿದೆ. ಬರಹದ ರೀತಿ ಬಹಳ ಇಷ್ಟವಾಯಿತು.

—ಯೋಗಾನಂದ

### ಉತ್ತಮ ಮಾಹಿತಿ

ಫೆ. 25ರ ಸಂಚಿಕೆಯ ಆರೋಗ್ಯ ಪುಟದಲ್ಲಿ ಉಮಾ ಅನಂತ್ ಬರೆದ 'ಕೊರೊನಾ ವ್ಯಾಕ್ಸಿನ್ ಬರುತ್ತಿದೆ' ಲೇಖನದಲ್ಲಿ ನೇಸಲ್ ಡ್ರಾಪ್ಸ್ ಪ್ರಯೋಜನವನ್ನು ಸಮಗ್ರವಾಗಿ ಬರೆದಿದ್ದಾರೆ.

—ಲಕ್ಷ್ಮಣ್ ರಾವ್ ಎಂ. ಎಲ್., ದಾವಣಗೆರೆ

### ಹಿರಿಯರ ಹರಕೆಯ ಕೈ

ಫೆ. 25ರ ಪಾಲನೆ ಪೋಷಣೆ ಪುಟದಲ್ಲಿ ಸ್ವಯಂಪ್ರಭಾ ಅವರು ಬರೆದಿರುವ 'ನಮ್ಮ ನೆತ್ತಿಯ ಮೇಲೆ ಹಿರಿಯರ ಹರಕೆಯ ಕೈ' ಲೇಖನ ಅರ್ಥಪೂರ್ಣವಾಗಿದೆ.

—ಆಶಾ ಎಂ.ಜೆ., ಚಿತ್ರದುರ್ಗ

## ಅಕ್ಷರ ಸಾಹಿತ್ಯ ವೇದಿಕೆ

ಹುಬ್ಬಳ್ಳಿಯ 'ಅಕ್ಷರ ಸಾಹಿತ್ಯ ವೇದಿಕೆ'ಯು 'ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ/ನಿ ಕಥಾ ಸ್ಪರ್ಧೆ' ಏರ್ಪಡಿಸಿದೆ. ನಾಡಿನ ಎಲ್ಲ ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬಹುದು. ಆಯ್ಕೆಯಾದ ಕಥೆಗೆ ₹ 5000 ನಗದು ಹಾಗೂ ಪ್ರಶಸ್ತಿ ಫಲಕ ಕೊಡಲಾಗುತ್ತದೆ.

ಸ್ಪರ್ಧಾಕಾಂಕ್ಷಿಗಳು ವಿದ್ಯಾರ್ಥಿ/ನಿ ದೃಢೀಕರಣ ಪತ್ರದೊಂದಿಗೆ ತಮ್ಮ ಅಪ್ರಕಟಿತ ಕಥೆಯೊಂದನ್ನು ಕಳುಹಿಸಬೇಕು. ಇ –ಮೇಲ್ ಮೂಲಕವೂ ಕಳಿಸಬಹುದು. ಕೊನೆಯ ದಿನಾಂಕ: ಮಾರ್ಚ್ 20, 2021. ವಿಳಾಸ: ಡಾ. ಪ್ರಹ್ಲಾದ ಅಗಸನಕಟ್ಟೆ ಸ್ಮರಣಾರ್ಥ ಕಥಾಸ್ಪರ್ಧೆ, c/o ಸುನಂದಾ ಪ್ರಕಾಶ ಕಡಮೆ, # 90, 'ನಾಗಸುಧೆ' 6/ಬಿ ಅಡ್ಡರಸ್ತೆ, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 580031, ದೂ: 9845779387 ಮೇಲ್: sunandakadame@gmail.com

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in